## 14. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಬಗನಕಟ್ಟೆ ಶಿಕಾರಿಪುರ ತಾ॥

ಸ.ಹಿ.ಪ್ರಾ.ಶಾಲೆ ಬಗನಕಟ್ಟೆ ಈ ಶಾಲೆಯು ಸ್ವಾತಂತ್ರ್ಯ ಪೂರ್ವದಲ್ಲಿ ಅಂದರೆ 1943ರಲ್ಲಿ ಪ್ರಾರಂಭವಾಯಿತು, ಅಂದಿನಿಂದ ಈ ಶಾಲೆಯಲ್ಲಿ ತರಗತಿಗಳು ಪ್ರಾರಂಭವಾಗಿ ಸುತ್ತಮುತ್ತ ಗ್ರಾಮಗಳಿಂದ ವಿದ್ಯಾರ್ಥಿಗಳು ಬಂದು ಈ ಶಾಲೆಯಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ನಮ್ಮ ಶಾಲೆಯ ವಿದ್ಯಾರ್ಥಿಗಳು ಕ್ರೀಡಾಕೂಟ, ಪ್ರತಿಭಾಕಾರಂಜಿ, ಇನ್ಸ್ಪೈರ್ ಆವಾರ್ಡ್ ಮುಂತಾದ ಕಾರ್ಯಕ್ರಗಳಲ್ಲಿ ಭಾಗವಹಿಸಿ ವಲಯಮಟ್ಟದಿಂದ ವಿಭಾಗ ಮಟ್ಟದವರೆಗೂ ಸ್ಪರ್ಧೆ ಮಾಡಿ ಈ ಶಾಲೆಯ ಕೀರ್ತಿ ಪತಾಕೆಯನ್ನು ಹಾರಿಸಿರುತ್ತಾರೆ.

1986 ರಲ್ಲಿ ಶ್ರೀ ಗಂಗಾಧರಪ್ಪ ಪಟೇಲ್ ಇವರು ಒಂದು ಎಕರೆ ಜಮೀನನ್ನು ಶಾಲೆಗೆ ದಾನವಾಗಿ ನೀಡಿರುತ್ತಾರೆ. ಶಾಲೆ ಪ್ರಾರಂಭಗೊಂಡಾಗಿನಿಂದ 2016–17 ರವರೆಗೆ ಶಾಲಾ ನಿವೇಶನವೂ ಕೂಡ ಶಾಲೆ ಹೆಸರಿಗೆ ಇರಲಿಲ್ಲ, ಜಮೀನಿನ ಮಾಲೀಕರಾದ ಶ್ರೀಮತಿ ಮಂಜಮ್ಮ ಕೊಂ ಬಸವನಗೌಡ ಜೋಗಿಹಳ್ಳಿ ಇವರಿಂದ 23 ಗುಂಟೆ ಜಮೀನನ್ನು ಶಾಲೆಯ ಹೆಸರಿಗೆ ಖಾತೆ ಮಾಡಿಸಿಕೊಳ್ಳಲಾಯಿತು.

2015–16ನೇ ಸಾಲಿನಲ್ಲಿ ಈ ಶಾಲೆಗೆ ಇನ್ಫೋಸೀಸ್ ಪ್ರತಿಷ್ಠಾನ ಬೆಂಗಳೂರು ಇವರಿಂದ ಐದು ಗಣಕಯಂತ್ರಗಳನ್ನು ದಾನವಾಗಿ ಪಡೆಯಲಾಯಿತು. ಶಾಲಾ ಶಿಕ್ಷಕರ ವತಿಯಿಂದ ಹಣಸಂಗ್ರಹಣೆ ಮಾಡಿ ಪ್ರೋಜೆಕ್ಟರ್ ಖರೀದಿಸಿ ಸ್ಮಾರ್ಟ್‌ಕ್ಲಾಸ್ ಪ್ರಾರಂಭಿಸಲಾಯಿತು. ದಾನಿಗಳಿಂದ ಜೆರಾಕ್ಸ್ ಮಿಷನ್ ಪಡೆಯಾಯಿತು. ಅಲ್ಲದೇ ಮಕ್ಕಳಿಗೆ ಊಟಕ್ಕೆ ಅನುಕೂಲವಾಗುವಂತೆ ಸ್ವಾಮಿ ಮೋಟಾರ್ ಶಿಕಾರಿಪುರ ಇವರಿಂದ 100 ತಟ್ಟೆ & 100 ಲೋಟಗಳನ್ನು ದಾನವಾಗಿ ಪಡೆಯಲಾಯಿತು.

2018–19ನೇ ಸಾಲಿನ ಎಸ್.ಡಿ.ಎಂ.ಸಿ ಅಧ್ಯಕ್ಷರಾದ ಶ್ರೀ ಜಯಪ್ಪ ಎಂ ಎಸ್ ಇವರು ತಮ್ಮ ತಂದೆ–ತಾಯಿಯರ ನೆನಪಿಗಾಗಿ ಸುಂದರವಾದ ಧ್ವಜ ಸ್ಥಂಭವನ್ನು ನಿರ್ಮಾಣ ಮಾಡಿಸಿ ಕೊಟ್ಟಿರುತ್ತಾರೆ. ಶ್ರೀಮತಿ ಸುಮಿತ್ರಮ್ಮ ಕೊಂ ಶಾಂತಪ್ಪ ಅಟ್ಟಮನಿ, ನೀಲಮ್ಮ ಕೊಂ ಜಗದೀಶ್ವರಪ್ಪ ಇವರು ಮಕ್ಕಳಿಗೆ ಅನುಕೂಲವಾಗುವಂತೆ ಜೋಕಾಲಿಗಳನ್ನು ನಿರ್ಮಿಸಿ ಕೊಟ್ಟಿರುತ್ತಾರೆ. ಶಾಲೆಯ ವನದ ನಿರ್ವಹಣೆಯನ್ನು ಶಿಕ್ಷಕರು ವಹಿಸಿಕೊಂಡು ಉತ್ತಮವಾಗಿ ನಿರ್ವಹಿಸಿರುತ್ತಾರೆ. ಪ್ರಸ್ತುತ 2018–19ನೇ ಸಾಲಿನಲ್ಲಿ 159 ವಿದ್ಯಾರ್ಥಿಗಳಿದ್ದು 8ಜನ ಶಿಕ್ಷಕರು ಕಾರ್ಯನಿರ್ವಹಿಸಿರುತ್ತಾರೆ,




ಶಾಲಾ ಪ್ರವೇಶದ್ವಾರ




ಶಾಲಾ ಆವರಣ




ಶಾಲಾ ಉದ್ಯಾನವನ



ಧ್ವಜ ಸ್ಥಂಭ







ನೂತನ ಕೊಠಡಿಗಳು


2018.12.19 11:25


bidugadeya haadu
2018.12.06 10:55


2018.12.20 16:28


2018.12.06 10:31




ಪುಷ್ಯ
ಮಾಘ
ಆಶ್ವೀಜ
ಕಾರ್ತಿಕ
ಮಾರ್ಗಶಿರ
ಆಷಾಢ
ಶ್ರಾವಣ
ಭಾದ್ರಪದ
ವೈಶಾಖ
ಜ್ಯೇಷ್ಠ


A B C D E F G H I
J K L M N O P Q
R S T U V W X Y Z
APRIL


ನಲಿಕಲಿ
B


2019.01.11 14:50


ಭೂಸಾರಿಗೆ
ವಾಯುಸಾರಿಗೆ
ಜಲಸಾರಿಗೆ